ಜಿಲ್ಲಾ ಪರಿಷತ್ತುಗಳ ಉಪಾಧ್ಯಕ್ಷರುಗಳಿಗೆ ತಗಲಿದ ವೆಚ್ಚ

೩೨೦. ಶ್ರೀ ಆರ್. ಶಿವರಾಮೇಗೌಡ(ನಾಗಮಂಗಲ).—ಮಾನ್ಯ ಗ್ರಾಮಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಉಪಾಧ್ಯಕ್ಷರ ಸಂಬಳ ಭತ್ಯೆಗಳು ಮನೆ ಬಾಡಿಗೆ ಭತ್ಯ ಇವುಗಳಿಗಾಗಿ ಖರ್ಚು ಮಾಡಿದ ಮೊತ್ತವೆಷ್ಟು ?

ಆ) ವೇಲ್ಕಂಡ ಸ್ಥಾನಗಳು ನಿರರ್ಥಕವಾಗಿರುವುದರಿಂದ ಅವುಗಳನ್ನು ರದ್ದುಗೊಳಿಸುವ ಯೋಜನೆ ಸರ್ಕಾರದವರ ಮುಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ(ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಅನುಬಂಧ 'ಅ' ನಲ್ಲಿ ಕೊಡಲಾಗಿದೆ.

ಆ) –ಇಲ್ಲ–

ಅನುಬಂಧ–ಅ

ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳ ಉಪಾಧ್ಯಕ್ಷರುಗಳ ಸಂಬಳ, ಪ್ರವಾಸಭತ್ಯ ಮತ್ತು ದಿನಭತ್ಯ ಹಾಗೂ ಮನೆಬಾಡಿಗೆ ಭತ್ಯಗಳಿಗಾಗಿ ದಿನಾಂಕ : ೧–೪–೮೯ ರಿಂದ ೩೦–೧೧–೮೯ ರವರೆಗೆ ಖರ್ಚು ಮಾಡಿದ ಹಣದ ವಿವರ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲಾಪರಿಷತ್ತಿನ ಹೆಸರು	ಸಂಬಳ	ಪ್ರವಾಸಭತ್ಯ ಮತ್ತು ದಿನಭತ್ಯ	ಮನೆಬಾಡಿಗೆ ಭತ್ಯ	ಒಟ್ಟು
೧	ಬೆಂಗಳೂರು (ಗ್ರಾಮಾಂತರ)	೦.೩೯೦	೦.೧೦೬	೦.೫೪೦	೧.೦೩೬
೨	ಬಿಜಾಪುರ	೦.೧೫೧	೦.೩೨೦	೦.೧೦೦	೦.೫೭೧
೩	ಬೀದರ್	೦.೧೪೪	೦.೮೬೩	೦.೦೬೦	೧.೦೬೭
೪	ಬಳ್ಳಾರಿ	೦.೩೯೮	೦.೬೫೫	೦.೧೮೦	೧.೨೨೫
೫	ಬೆಳಗಾಂ	೦.೪೮೦	೦.೬೨೭	೦.೧೯೫	೧.೨೨೨
೬	ಚಿತ್ರದುರ್ಗ	೦.೧೪೦	೦.೩೩೦	೦.೧೨೦	೦.೬೩೦
೭	ಚಿಕ್ಕಮಗಳೂರು	೦.೩೩೬	೦.೩೮೭	೦.೧೧೨	೦.೮೩೫
೮	ಧಾರವಾಡ	೦.೧೬೦	೦.೮೮೨	—	೧.೦೪೨
೯	ದಕ್ಷಿಣ ಕನ್ನಡ	೦.೧೬೦	೦.೭೯೭	೦.೨೪೦	೧.೧೯೭
೧೦	ಗುಲ್ಬರ್ಗಾ	೦.೧೯೬	೦.೩೫೯	೦.೧೬೦	೦.೭೧೫
೧೧	ಹಾಸನ	೦.೧೬೦	೦.೮೩೮	೦.೦೮೦	೧.೦೭೮
೧೨	ಕೋಲಾರ	೦.೪೨೦	೦.೩೭೪	೦.೦೮೦	೦.೮೭೪
೧೩	ಕೊಡಗು	೦.೧೬೦	೦.೧೨೪	೦.೦೮೦	೦.೩೬೪
೧೪	ಮಂಡ್ಯ	೦.೩೪೬	೦.೩೨೨	೦.೧೧೯	೦.೭೭೭
೧೫	ಮೈಸೂರು	೦.೩೪೬	೦.೧೯೩	೦.೨೪೯	೧.೨೮೮
೧೬	ರಾಯಚೂರು	೦.೧೬೦	೦.೪೭೯	೦.೧೬೦	೦.೭೯೯
೧೭	ಶಿವಮೊಗ್ಗ	೦.೧೬೦	೦.೭೫೮	೦.೦೪೫	೦.೦೬೩
೧೮	ತುಮಕೂರು	೦.೩೨೦	೦.೨೪೯	೦.೦೮೦	೦.೬೪೯
೧೯	ಉತ್ತರ ಕನ್ನಡ	೦.೧೬೦	೦.೫೪೦	೦.೦೨೦	೦.೮೨೦
	ಒಟ್ಟು	೪.೭೫೯	೧೦.೨೦೪	೨.೮೧೦	೧೮.೭೫೩

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದರೂ ಕೂಡ ನಾನು ಇದರ ಬಗ್ಗೆ ಸ್ವಲ್ಪ ವಿವರವಾಗಿ ಅಂಕಿ ಅಂಶಗಳನ್ನು ಹೇಳಬೇಕಾಗಿದೆ. ಪ್ರತಿಯೊಂದು ಜಿಲ್ಲೆಗಳಲ್ಲೂ ಅಲ್ಲಿನ ಜಿಲ್ಲಾ ಪರಿಷತ್ತಿನ ಉಪಾಧ್ಯಕ್ಷರಿಗೆ ಕೊಟ್ಟಿರತಕ್ಕ ಸಂಬಳದ ಪಟ್ಟಿ ಈ ರೀತಿ ಇದೆ :— ಬೀದರ್—ರೂ. ೨೫,೪೫೦—೦೦, ಬಳ್ಳಾರಿ—೧೩,೩೬೮—೦೦ ರೂ. ಬೆಳಗಾಂ—ರೂ. ೧೫,೭೧೪೦೦೦ ಚಿತ್ರದುರ್ಗ — ೭,೮೭೫—೦೦, ಚಿಕ್ಕಮಗಳೂರು—೧೦,೪೬೮—೦೦, ಧಾರವಾಡ—೧೩,೦೭೫ ರೂ. ದಕ್ಷಿಣ ಕನ್ನಡ ಜಿಲ್ಲೆ ರೂ. ೧೬,೯೬೩—೦೦, ಗುಲ್ಬರ್ಗಾ—೧೪,೯೬೩—೨೦, ಹಾಸನ— ೮೯೫೮—೦೦ ಕೋಲಾರ—೧೦,೯೨೫—೨೦ ಕೊಡಗು—೪,೪೪೦—೦೦ ಮಂಡ್ಯ — ರೂ.೯,೭೫೩—೦೨ ಮೈಸೂರು— ರೂ. ೨೮,೩೫೦—೦೦. ರಾಯಚೂರು—ರೂ.೯.೯೮೮—೦೦, ಶಿವಮೊಗ್ಗಾ — ರೂ.೧೩,೨೮೮—೦೦...

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳುತ್ತಿರುವುದಕ್ಕೂ ನನಗೆ ಒದಗಿಸಿರತಕ್ಕ ಉತ್ತರಕ್ಕೂ ವ್ಯತ್ಯಾಸವಿದೆ...

ಶ್ರೀ ಬಿ. ಬಸವಲಿಂಗಪ್ಪ.—ಈ ಉತ್ತರವನ್ನು ನಾನೇ ತಯಾರು ಮಾಡಿದ್ದೇನೆ ಅದನ್ನು ತಮಗೆ ಹೇಳುತ್ತಿದ್ದೇನೆ. ತುಮಕೂರು— ರೂ. ೮,೧೧೩—೦೦ ಉತ್ತರ ಕನ್ನಡ— ರೂ.೧೦,೫೩—೦೨ ಬಿಜಾಪುರ ರೂ. ೭,೧೩೮—೦೦ ಆಯಾಯ ಜಿಲ್ಲೆಯಲ್ಲಿ ಒಂದು ತಿಂಗಳಿಗೆ ಪಾವತಿ ಆಗಿರತಕ್ಕ ಹಣ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಪ್ರಶ್ನೆ ಕೇಳಿದ್ದು ಏನೆಂದರೆ ಜಿಲ್ಲಾಪರಿಷತ್ತಿನ ಉಪಾಧ್ಯಾಕ್ಷರ ಸಂಬಳ, ಭತ್ಯ ಇವುಗಳಿಗೆ ಖರ್ಚು ಮಾಡಿದ ಮೊತ್ತವೆಷ್ಟು ಎಂದು ಕೇಳಿದ್ದಕ್ಕೆ ೧—೪—೧೯೬೯ ರಿಂದ ೩೦—೧೧—೧೯೬೯ರ ವರೆಗೆ ಕೊಟ್ಟಿರತಕ್ಕಂಥ ಮಾಹಿತಿಯ ಪ್ರಕಾರ ೧೯ ಲಕ್ಷ ರೂಪಾಯಿಗಳು. ಇದು ಕಳೆದ೭ ತಿಂಗಳಲ್ಲಿ ಜಿಲ್ಲಾಪರಿಷತ್ ಉಪಾಧ್ಯಕ್ಷರಿಗೆ ಸರ್ಕಾರದವರು ಖರ್ಚು ಮಾಡಿರತಕ್ಕಂಥ ಹಣ. ನಾನು ಜಿಲ್ಲಾಪರಿಷತ್ ಸದಸ್ಯನಾಗಿ ನೋಡಿದ್ದೇನೆ. ಜಿಲ್ಲಾ ಪರಿಷತ್ ಉಪಾಧ್ಯಕ್ಷರು ಬೇಕೆ ಬೇಡವೆ ಎನ್ನುವ ಪ್ರಶ್ನೆ ಇಲ್ಲಿ ಚರ್ಚೆಯಾಗಿದೆ. ತಾವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರಾಗಿ ಬಂದಿರುವುದು ಬಹಳ ಸಂತೋಷ. ಜಿಲ್ಲಾ ಪರಿಷತ್ ಸಮರ್ಪಕವಾಗಿ ಮತ್ತು ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ ಅಧಿಕಾರ ವಿಕೇಂದ್ರೀಕರಣವಾಗಿರುವುದನ್ನು ಪರಿಪಡಿಸಬೇಕೆಂದು ಒಂದು ದಿಟ್ಟ ಹೆಜ್ಜೆಯನ್ನು ತಾವು ಇಟ್ಟಿರುವುದನ್ನು ನೋಡಿದ್ದೇವೆ. ಇನ್ನು ಮುಂದೆ ಜಿಲ್ಲಾ ಪರಿಷತ್ ಉಪಾಧ್ಯಕ್ಷರ ಹುದ್ದೆ ಬೇಡವೇ ಅಥವಾ ಮುಂದುವರಿಯಬೇಕೆ ಎನ್ನುವ ಹಿನ್ನೆಲೆಯ ದೃಷ್ಟಿಯಿಂದ ನೋಡಿದರೆ, ಈಗಿನ ಕಾನೂನಿನ ಚೌಕಟ್ಟಿನಲ್ಲಿ ಅವರಿಗೆ ಏನೇನೂ ಕೆಲಸವಿರುವುದಿಲ್ಲ. ಎಲ್ಲಾ ಜಿಲ್ಲಾಪರಿಷತ್ತಿನ ಉಪಾಧ್ಯಕ್ಷರು ಕಾರನ್ನು ತೆಗೆದುಕೊಂಡು ಊಟಕ್ಕೆ ಮತ್ತು ದೇವಸ್ಥಾನಗಳಿಗೆ ಹೋಗತಕ್ಕಂಥ ಕೆಲಸವನ್ನು ಬಿಟ್ಟರೆ ಬೇರೇನು ಕೆಲಸವಿಲ್ಲ. ಅವರನ್ನು ತೆಗೆಯುವ ಪ್ರಶ್ನೆ ಸರ್ಕಾರ ಪಂಯಿಂದ ಇದ್ದರೆ ದಯವಿಟ್ಟು ಖಿಳಿಸಿ. ಅವರು ಸರ್ಕಾರಕ್ಕೆ ಒಂದು ಬಿಳಿ ಆನೆ ಇದ್ದಂತೆ. ಲೋಕಾಯುಕ್ತ ದೊಡ್ಡ ಆನೆಯಾದರೆ ಇವರು ಬಿಳಿ ಆನೆ ಮರಿಗಳೆದ್ದಂತಿರುತ್ತಾರೆ. ಇವರಿಂದ ಸರ್ಕಾರಕ್ಕೆ ಬಹಳ ವೆಚ್ಚ ಬರುತ್ತಿದೆ. ಆದ್ದರಿಂದ ಇವರನ್ನು ತೆಗೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂಬುದನ್ನು ದಯವಿಟ್ಟು ಖಿಳಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇವರಿಗೆ ಜಿಲ್ಲಾಪರಿಷತ್ ಅಧ್ಯಕ್ಷರು ಕೆಲಸ ಕೊಟ್ಟರೆ ಉಂಟು. ಇಲ್ಲವಾದರೆ ಇಲ್ಲ. ಉಪಾಧ್ಯಕ್ಷರಿಗೆ ಪ್ರಭಾಸಭತ್ಯ ಏನು ಅವರಿಗೆ ಸಲ್ಲತಕ್ಕಂಥದ್ದು ಇವೆ ಆ ಹಣದ ವಿವರಗಳನ್ನು ವಿವರವಾಗಿ ಕೊಟ್ಟಿದ್ದೇನೆ ಬೆಂಗಳೂರು ಡಿಸ್ಟ್ರಿಕ್ಟ್ ಉಪಾಧ್ಯಕ್ಷರಿಗೆ ೨೫೦ ರೂಪಾಯಿ ಟಿ. ಎ. ಡಿ. ಎ. ಎಂದು ಖರ್ಚುಮಾಡಿರುವುದು ಹೇಳಿದ್ದೇನೆ. ಅವರನ್ನು ಇಟ್ಟುಕೊಳ್ಳಬೇಕೆ ಅಥವಾ ಬೇಡವೆ ಎನ್ನುವುದು ಮುಂದಿನ ವಿಚಾರ. ಈ ಬಗ್ಗೆ ತಿದ್ದುಪಡಿ ತಂದಾಗ ಆದರ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಸಚಿವರು ಮಂಡ್ಯ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಹೇಳಿದ್ದೇವೆ. ಇದು ಒಂದು ಸಮಗ್ರವಾಗಿ ಚಿಂತನೆ ಮಾಡತಕ್ಕಂಥ ವಿಚಾರವಾಗಿದೆ. ಗ್ರಾಮ ಪಂಚಾಯತಿ ವಿಚಾರದಲ್ಲೂ ಮತ್ತು ಜಿಲ್ಲಾಪರಿಷತ್ ವಿಕೇಂದ್ರೀಕರಣ ವಿಚಾರದಲ್ಲಿ ಏನೂ ಪ್ರಯೋಜನ ವಿಲ್ಲದಿರುವುದರಿಂದ ತಾವು ಏನು ಮಾಡುತ್ತೀರಿ ಮತ್ತು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಎನ್ನುವ ವಿಚಾರವನ್ನು ಹೇಳಬೇಕು ?

ಶ್ರೀ ಬಿ. ಬಸವಲಿಂಗಪ್ಪ.—ಗುಲ್ಬರ್ಗಾ ಉಪಾಧ್ಯಕ್ಷರ ವಿಚಾರವಾಗಿ ಹೇಳಬೇಕೆಂದರೆ, ಅವರನ್ನು ವಜಾ ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ತಿದ್ದುಪಡಿ ತಂದಾಗ ಯೋಚನೆ ಮಾಡೋಣ ವೆಂದು ಹೇಳುತ್ತೇನೆ.